

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಂತ್ರಕ್ಕಿಂತ ಉಗುಳೇ ಜಾಸ್ತಿ!

ಬೆಳಗ್ಗೆ ಎದ್ದೊಡನೆಯೇ ಅನೇಕರಿಗೆ ನೆನಪಾಗುವುದು ಬೆಡ್‌ಕಾಫಿ ಮತ್ತು ದಿನಪತ್ರಿಕೆ. ದೇವರಾಗಲೀ, ಪ್ರಾತಃಸ್ಮರಣೀಯರಾದ ಪುಣ್ಯಪುರುಷರಾಗಲೀ ಅಲ್ಲ. ಕಾಫಿಯನ್ನು ಗುಟುಕರಿಸುತ್ತಾ ಪತ್ರಿಕೆಯ ಮೇಲೆ ಕಣ್ಣು ಹಾಯಿಸುವುದನ್ನು ಮೈಗೂಡಿಸಿಕೊಂಡಿರುತ್ತಾರೆ.

**ಕರಾಗ್ರದಲ್ಲಿ ಬಿಸಿ ಬಿಸಿ ಬೆಡ್ ಕಾಫಿ**
**ಕರಮಧ್ಯದಲ್ಲಿ ಕರ್ಣಪಿಶಾಚಿ (ಮೊಬೈಲ್)**
**ಕರಮೂಲದಲ್ಲಿ ಬಿಸಿ ಬಿಸಿ ಸುದ್ದಿ**
**ಮುಖದರ್ಶನವ ಮಾಡುವರು ಹಾಳು ಮಂದಿ**

ದಿನಪತ್ರಿಕೆ ಮಾರನೆಯ ದಿನಕ್ಕೆ ರದ್ದಿಪೇಪರ್ ಆಗುತ್ತದೆ. ಮಾರಿದರೆ ಆಪತ್ಕಾಲದಲ್ಲಿ ಮನೆಯ ಖರ್ಚಿಗೆ ದುಡ್ಡು ಸಿಗುತ್ತದೆಯೆಂದು ಸಂಪಾದಕರ 'ಸುದ್ದಿಮನೆ'ಯಲ್ಲಿ ಓದಿದ್ದೀರಿ. ಕನ್ನಡದ ರದ್ದಿ ಪೇಪರ್ ಕೆ.ಜಿ. ಗೆ 4 ರೂ. ಅದೇ ಇಂಗ್ಲೀಷ್ ರದ್ದಿಪೇಪರ್‌ಗೆ 5 ರೂ. ಕನ್ನಡವಾದರೇನು, ಇಂಗ್ಲೀಷ್ ಆದರೇನು? ಒಂದು ಕೆ.ಜಿ ಎಂದರೆ ಎರಡರ ತೂಕ ಒಂದೇ ಅಲ್ಲವೇ? ಕನ್ನಡದ ರದ್ದಿ ಪೇಪರ್‌ಗೆ ಕಡಿಮೆ ಬೆಲೆ ಏಕೆ? ಕನ್ನಡದ ನೆಲದಲ್ಲಿ ಕನ್ನಡದ ಅನಾದರಣೆಯ ಪ್ರತೀಕ ಇರಬಹುದೇ? ಅದೇನೇ ಇರಲಿ ಪತ್ರಿಕೆ ರದ್ದಿ ಪೇಪರ್ ಆಗಿ ಬೆಲೆಯನ್ನು ಕಳೆದುಕೊಂಡರೂ ಅದರಲ್ಲಿರುವ ಅನೇಕ ವಿಚಾರಗಳಿಗೆ ಸದಾ ಕಾಲ ಬೆಲೆ ಇರುತ್ತದೆ. ಮೇಲಿನ ನಮ್ಮ ಕವಿತೆಗೆ ಸ್ಫೂರ್ತಿಯನ್ನು ನೀಡಿದ ಸಂಸ್ಕೃತ ಸೂಕ್ತಿ ಹೀಗಿದೆ:

**ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ ।**
**ಕರಮೂಲೇ ಸದಾ ಗೌರೀ ಪ್ರಭಾತೇ ಕರದರ್ಶನಮ್ ॥**

**ಕರಾಗ್ರದಲ್ಲಿ ವಾಸಿಸುವಳು ಲಕ್ಷ್ಮೀ**
**ಕರಮಧ್ಯದಲ್ಲಿ ಸರಸ್ವತೀ**
**ಕರಮೂಲದಲ್ಲಿ ಗೌರೀ**
**ಕರದರ್ಶನವ ಮಾಡಿರೈ ಮುಂಜಾವದಲಿ**

ಬೆಳಗಿನ ನಸುಕಿನಲ್ಲಿ ವಾಯುವಿಹಾರ ಹೊರಟಾಗ ನಮಗೆ ನೆನಪಾಗಿದ್ದು ಭಾರತೀಯರೆಲ್ಲರಿಗೂ ಗೊತ್ತಿರುವ ಮೇಲಿನ ಸಂಸ್ಕೃತ ಸೂಕ್ತಿ. ಮಕ್ಕಳಿಗೆ ಹೇಳಿಕೊಡುವ ಅನೇಕ ಪ್ರಾರ್ಥನೆಗಳಲ್ಲಿ ಇದೂ ಒಂದು. ಕೈಯೊಳಗೆ ಲಕ್ಷ್ಮೀ, ಸರಸ್ವತೀ ಮತ್ತು ಗೌರೀ ಇದ್ದಾರೆ. ಬೆಳಗ್ಗೆ ಎದ್ದ ತಕ್ಷಣ ಕರದರ್ಶನ ಮಾಡಿದರೆ ಈ ದೇವತೆಗಳ ದರ್ಶನ ಮಾಡಿದಂತೆ ಆಗುತ್ತದೆ ಎನ್ನುವುದು ಇಲ್ಲಿರುವ ಆಶಯ. ಮುಂದೆ ಮುಂದೆ ಹೆಜ್ಜೆ ಇಡುತ್ತಿದ್ದಂತೆ ನಮ್ಮ ಮನಸ್ಸಿನಲ್ಲಿ ಮೂಡಿದ ಪ್ರಶ್ನೆ: ಉಪದೇಶಾತ್ಮಕವಾದ ಅಥವಾ ಸೂಚನೆಯ ರೂಪದಲ್ಲಿರುವ ಈ ಶ್ಲೋಕ ಪ್ರಾರ್ಥನೆ ಹೇಗೆ ಆಗಬಲ್ಲುದು? ಕೈಯೊಳಗಿರುವ ಲಕ್ಷ್ಮೀ, ಸರಸ್ವತೀ, ಗೌರೀ ಇವರುಗಳಿಗೆ 'ವಂದೇ, ನಮಾಮಿ, ಸ್ಮರಾಮಿ' ಎಂದರೆ ಪ್ರಾರ್ಥನೆ ಆಗಬಹುದೇ ಹೊರತು, ದೇವರಿಗೆ ನಮಸ್ಕರಿಸು, ವಂದಿಸು ಎಂದು ಹಿರಿಯರು ಮಕ್ಕಳಿಗೆ ಆದೇಶಿಸುವ ಧಾಟಿಯಲ್ಲಿರುವುದು ಪ್ರಾರ್ಥನೆ ಹೇಗಾಗುತ್ತದೆ?

ಚಿಕ್ಕಂದಿನಲ್ಲಿ ಕೇಳಿದ ಒಂದು ಪ್ರಹಸನ ನೆನಪಾಯಿತು. ಹಳ್ಳಿಯ ಉತ್ಸಾಹಿ ಯುವಕರು ಮತ್ತು ಹಿರಿಯರು ಸೇರಿ ಊರ ಜಾತ್ರೆಯ ಸಂದರ್ಭದಲ್ಲಿ ಆಡಲೆಂದು ಮಹಾಭಾರತ ನಾಟಕವನ್ನು ಕಲಿತರು. ನಾಟಕದ ಮೇಷ್ಟ್ರು ಎಲ್ಲಾ ಪಾತ್ರಧಾರಿಗಳಿಗೂ ಅವರವರ 'ಡಯಲಾಗ್' ಬರೆದುಕೊಟ್ಟಿದ್ದರು. ಪುಸ್ತಕದಲ್ಲಿ ಬರೆದುಕೊಟ್ಟಿರುವುದನ್ನು ಸರಿಯಾಗಿ ಗಟ್ಟಿಮಾಡಿಕೊಂಡು ಒಂದು ಅಕ್ಷರವನ್ನೂ ಬಿಡದಂತೆ ತಪ್ಪಿಲ್ಲದೆ ಹೇಳಬೇಕೆಂದು ನಾಟಕದ ಹಿಂದಿನ ದಿನ ಮೇಷ್ಟ್ರು ತಾಕೀತು ಮಾಡಿದ್ದರು. ಹಿಂದಿನ ಕಾಲದಲ್ಲಿ ನಾಟಕದ ಮೇಷ್ಟ್ರು ಎಂದರೆ ಹಳ್ಳಿಗರು ಬಹಳ ಗೌರವವನ್ನು ಕೊಡುತ್ತಿದ್ದರು. ಅವರನ್ನು ಕಂಡರೆ ಅಷ್ಟೇ ಹೆದರುತ್ತಿದ್ದರು. ನಾಟಕ ಆರಂಭವಾಯಿತು. ರಂಗಮಂಚದ ಮೇಲೆ ಪ್ರವೇಶ ಮಾಡಿದ ಭೀಮನ ಪಾತ್ರಧಾರಿ ಭೀಮಕಾಯದ ಊರ ಗೌಡ ತನ್ನ ಮೀಸೆಯನ್ನು ಹುರಿಮಾಡುತ್ತಾ "ಇದು ಭೀಮನ ಪಾರ್ಟಿನ ಪುಸ್ತಕ, ಕಲಲಲೇ ಶಹಬ್ಬಾಶ್!..." ಎಂದು ಹೂಂಕರಿಸುತ್ತಾ ತನ್ನ ಬಲಗಾಲನ್ನು ರಂಗಮಂಚದ ಹಲಗೆಯ ಮೇಲೆ ಬಲವಾಗಿ ಕುಕ್ಕಿದ. ದುರದೃಷ್ಟವಶಾತ್ ಹಲಗೆ ಜೋಡಿಸಲು ಹೊಡೆದಿದ್ದ ಕಬ್ಬಿಣದ ಮೊಳೆ ಅವನ ಕಾಲಿಗೆ ಡಾಕ್ಟರು ಇಂಜಕ್ಷನ್ ಕೊಟ್ಟಂತೆ ನೆಟ್ಟು ರಂಗಮಂಚದ ಮೇಲೆ ದೊಪ್ಪೆಂದು ಕುಸಿದುಬಿದ್ದ! ಮುಂದಿದ್ದ ಪ್ರೇಕ್ಷಕರು ಗಾಬರಿಗೊಂಡು ಗೌಡರ ರಕ್ಷಣೆಗೆ ಧಾವಿಸಿದರು! ಯಾವ ಪಾತ್ರಧಾರಿಯ ಮಾತುಗಳೆಂದು ಗೊತ್ತಾಗಲೆಂದು ನಾಟಕದ ಮೇಷ್ಟ್ರು ಪುಸ್ತಕದ ಆರಂಭದಲ್ಲಿ ಬರೆದು ಕೊಟ್ಟಿದ್ದನ್ನು ಸಂಭಾಷಣೆಯ ಮಾತುಗಳನ್ನಾಗಿ ಭೀಮನ ಪಾತ್ರಧಾರಿ ಊರ ಗೌಡ ಭ್ರಮಿಸಿದ್ದ!

ನಮ್ಮ ಕೆಲವು ಪುರೋಹಿತರು ಮದುವೆ ಮತ್ತಿತರ ಮಂಗಳ ಕಾರ್ಯಗಳಲ್ಲಿ ಮಂತ್ರಗಳನ್ನು ಹೇಳುವ ಸಂದರ್ಭಗಳಲ್ಲೂ ಇಂತಹ ಅವಾಂತರವನ್ನು ಮಾಡುತ್ತಾರೆ. ಪೂಜೆಗೆ ಕುಳಿತಾಗ ಮಾಡುವ ಷೋಡಶೋಪಚಾರಗಳಲ್ಲಿ 'ಘಂಟಾನಾದ'ವೂ ಒಂದು. ಅದನ್ನು ಕುರಿತ ಮಂತ್ರ ಹೀಗಿದೆ:

**ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ ।**
**ಕುರ್ವೇ ಘಂಟಾರವಂ ಭಕ್ತ್ಯಾ ಸರ್ವೋಪದ್ರವನಾಶನಮ್ ॥**

ಈ ಮಂತ್ರದಲ್ಲಿ ಪೂಜೆಗೆ ಕುಳಿತವನು 'ದೇವತೆಗಳನ್ನು ಆಹ್ವಾನಿಸಲು ಮತ್ತು ರಾಕ್ಷಸರನ್ನು ಹಾಗೂ ಇತರ ಎಲ್ಲ ಉಪದ್ರವಗಳನ್ನು ಓಡಿಸಲು ಭಕ್ತಿಯಿಂದ ಘಂಟಾನಾದ ಮಾಡುತ್ತಿದ್ದೇನೆ' ಎಂದು ಹೇಳುತ್ತಾನೆ. ಹೀಗೆ ಹೇಳಿದ ಮೇಲೆ 'ಇತಿ ಘಂಟಾನಾದಂ ಕೃತ್ವಾ' (ಹೀಗೆ ಘಂಟಾನಾದವನ್ನು ಮಾಡಿ) ಎಂದು ಪುಸ್ತಕದಲ್ಲಿ ಕೊಟ್ಟಿರುವ ಸೂಚನೆಯನ್ನೂ ಸಹ ಮಂತ್ರದ ಭಾಗವನ್ನಾಗಿ ಹೇಳಿದರೆ ಆ ದೇವರಿಗೇ ಪ್ರೀತಿ! ಗಂಟೆಯನ್ನು ಬಾರಿಸುವ ಮೂಲ ಉದ್ದೇಶ ಪೂಜೆಗೆ ಕುಳಿತ ವ್ಯಕ್ತಿಯ ಕಿವಿಗೆ ಹೊರಗಿನಿಂದ ಕರ್ಕಶವಾದ ಶಬ್ದ ಕೇಳದಿರಲಿ, ಮನಸ್ಸು ವಿಚಲಿತಗೊಳ್ಳದಿರಲಿ, ಪವಿತ್ರವಾದ ವಾತಾವರಣ ಮೂಡಿಬರಲಿ, ಮನಸ್ಸು ದೇವರ ಧ್ಯಾನದಲ್ಲಿ ಪೂರ್ಣವಾಗಿ ನೆಲೆಗೊಳ್ಳಲಿ ಎಂಬುದಾಗಿದೆ. ಆದರೆ ಪೂಜಾ ಸಂದರ್ಭದಲ್ಲಿ ಭಕ್ತಿಯಿಂದ ಉಚ್ಚರಿಸಬೇಕಾದ ಮಂತ್ರವೇ ಕೋಲಾಹಲವಾದರೆ ಪ್ರಯೋಜನವೇನು? 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಎಂಬ ಕನ್ನಡದ ಗಾದೆ ಈ ಹಿನ್ನೆಲೆಯಲ್ಲಿ ಬಂದಿರಬೇಕೆಂದು ತೋರುತ್ತದೆ.

ಮದುವೆ ಮಂಟಪದಲ್ಲಿ ವಧೂ-ವರರು ಹಸೆಮಣೆಯನ್ನೇರಿದಾಗ 'ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ' ಎಂದು ಹೇಳಿಸುವ ಮಂತ್ರ ಬಂಧುಬಾಂಧವರ ಎದುರಿನಲ್ಲಿ ಕೈಗೊಳ್ಳುವ ಒಂದು ಪ್ರಮಾಣವಚನ ಎಂದರೆ ತಪ್ಪಲ್ಲ. ಧರ್ಮಾರ್ಥಕಾಮಗಳು 'ಚತುರ್ವಿಧಪುರುಷಾರ್ಥ'ಗಳಲ್ಲಿ ಕೊನೆಯದಾದ 'ಮೋಕ್ಷ'ವನ್ನು ಹೊರತುಪಡಿಸಿ ಬರುವ ಮೊದಲ ಮೂರು ಜೀವನದ ಮೌಲ್ಯಗಳು. ದಾಂಪತ್ಯಜೀವನದಲ್ಲಿ ಈ ಮೂರು ಮೌಲ್ಯಗಳನ್ನು ಅತಿಕ್ರಮಿಸದಂತೆ ನಡೆದುಕೊಳ್ಳುತ್ತೇನೆಂದು ಮಾಡುವ ಸತ್‌ಸಂಕಲ್ಪವಿದು. ಎಲ್ಲರಿಗೂ ಗೊತ್ತಿರುವಂತೆ ಮಾಂಗಲ್ಯಧಾರಣೆಯ ಸಂದರ್ಭದಲ್ಲಿ ಮದುಮಗನಿಂದ ಹೇಳಿಸುವ ಅಪರೂಪದ ಮಂತ್ರ:

**ಮಾಂಗಲ್ಯತಂತುನಾನೇನ ಮಮ ಜೀವನಹೇತುನಾ ।**
**ಕಂಠೇ ಬಧ್ನಾಮಿ ಸುಭಗೇ ತ್ವಂ ಜೀವ ಶರದಾಂ ಶತಂ ॥**

ಇದು ಬಾಳಸಂಗಾತಿಯಾಗಲಿರುವ ನವವಧುವಿನ ಕೊರಳಿಗೆ ತಾಳಿಯನ್ನು ಕಟ್ಟುವಾಗ ಮದುಮಗ ಭಾವಪೂರ್ಣವಾಗಿ ಹೇಳುವ ಮಾತು: "ನನ್ನ ಜೀವನಕ್ಕೆ ಕಾರಣೀಭೂತವಾದ ಈ ಮಾಂಗಲ್ಯದ ಎಳೆಯನ್ನು (ತಂತು) ನಿನ್ನ ಕೊರಳಿಗೆ ಕಟ್ಟುತ್ತಿದ್ದೇನೆ. ಸುಶೋಭಿತಳಾದ ನೀನು ನೂರಾರು ವರ್ಷ ಬದುಕಿ ಬಾಳು!" ತುಂಬಾ ಅರ್ಥಪೂರ್ಣವಾದ ಈ ಮಂತ್ರ ಅನೇಕ ಪುರೋಹಿತರ ಬಾಯಲ್ಲಿ ಅಪಾರ್ಥಗೊಂಡಿದೆ. "ಮಾಂಗಲ್ಯತಂತುನಾ" ಎಂಬ ಸಮಸ್ತಪದವನ್ನು ಒಟ್ಟಾಗಿ ಹೇಳುವ ಬದಲು "ಮಾಂಗಲ್ಯಂ", "ತಂತು", "ನಾನೇನ" ಎಂದು ಬಿಡಿಸಿ 'ಮಾಂಗಲ್ಯ' ಶಬ್ದಕ್ಕೆ ಇಲ್ಲದ ಅನುಸ್ವಾರವನ್ನು ಸೇರಿಸಿ, ತಾಳಿಯನ್ನು ತಂದವನು ನಾನೇ ಎಂಬ ಅಪಾರ್ಥಬರುವಂತೆ ತಂತುವಿನಿಂದ "ನಾನೇನ" ಶಬ್ದವನ್ನು ಪ್ರತ್ಯೇಕಿಸಿ, ಒತ್ತುಕೊಟ್ಟು ಹೇಳಿಸಿ ಅವಾಂತರವೆಬ್ಬಿಸುತ್ತಾರೆ. ವಧೂವರರ ದಾಂಪತ್ಯಜೀವನಕ್ಕೆ ಕಾರಣೀಭೂತವಾದುದು ಬರೀ 'ತಂತು' (ಎಳೆ) ಅಲ್ಲ, ಪವಿತ್ರವಾದ ಮಾಂಗಲ್ಯದ ತಂತು. ಪುರೋಹಿತರ ಈ ತಪ್ಪು ಮಂತ್ರೋಚ್ಚಾರಣೆಯಿಂದಲೋ ಏನೋ ಮದುವೆಯಾದ ಅನೇಕ ಹೆಣ್ಣುಮಕ್ಕಳ ಕೊರಳಿಗೆ ಅದು 'ಉರುಳು' ಆಗಿ ಪರಿಣಮಿಸಿದೆ! ವೃತ್ರಾಸುರನೆಂಬ ರಾಕ್ಷಸನು ಇಂದ್ರನ ವಿರುದ್ಧ ಕೈಗೊಂಡಿದ್ದ ಯಾಗದಲ್ಲಿ 'ಇಂದ್ರಶತ್ರುರ್ವರ್ಧಸ್ವ' ಎಂದು ಹೇಳುವಾಗ ತಪ್ಪಾಗಿ ಸ್ವರೋಚ್ಚಾರಣೆ ಮಾಡಿದ್ದರಿಂದ ಇಂದ್ರನನ್ನು ಕೊಲ್ಲುವ ಬಲಶಾಲಿಯಾಗಿ (ಇಂದ್ರಃ ಶತ್ರುಃ ಯಸ್ಯ ಸಃ - ಬಹುವ್ರೀಹಿ ಸಮಾಸ - ಉದಾತ್ತಸ್ವರ) ರೂಪುಗೊಳ್ಳುವ ಬದಲು ಇಂದ್ರನ ಕೈಯಿಂದಲೇ ಹತನಾಗುವ (ಇಂದ್ರಸ್ಯ ಶತ್ರುಃ - ತತ್ಪುರುಷ ಸಮಾಸ - ಅನುದಾತ್ತಸ್ವರ) ದುರಂತವನ್ನು ತಂದುಕೊಂಡ!

ಮದುವೆ ಮನೆಯಲ್ಲಿ ಪುರೋಹಿತರ ಬಾಯಿಂದ ಎಲ್ಲರೂ ಕೇಳಿರುವ ಮತ್ತೊಂದು ಅರ್ಥಪೂರ್ಣ ಮಂತ್ರ:

**ತದೇವ ಲಗ್ನಂ ಸುದಿನಂ ತದೇವ**
**ತಾರಾಬಲಂ ಚಂದ್ರಬಲಂ ತದೇವ ।**
**ವಿದ್ಯಾಬಲಂ ದೈವಬಲಂ ತದೇವ**
**ಗೌರೀಪತೇ ತೇಽಂಘ್ರಿಯುಗಂ ಸ್ಮರಾಮಿ ॥**

ಈ ಮಂತ್ರದ ಕೊನೆಯಲ್ಲಿ ಶೈವರಾದರೆ 'ಗೌರೀಪತೇ' ಎನ್ನುತ್ತಾರೆ. ವೈಷ್ಣವರಾದರೆ 'ಲಕ್ಷ್ಮೀಪತೇ' ಎನ್ನುತ್ತಾರೆ. ಒಟ್ಟಾರೆ ಮದುವೆ ಮನೆಯಲ್ಲಿ ಜಗಳವಾಡುವುದು ಬೇಡ. ಇದರ ಅರ್ಥ: 'ಗೌರೀಪತಿ/ಲಕ್ಷ್ಮೀಪತಿಯಾದ ಶಿವನ/ವಿಷ್ಣುವಿನ ಪಾದಗಳನ್ನು ನಾನು ಯಾವಾಗ ಸ್ಮರಿಸುತ್ತೇನೋ ಅದೇ (ತದೇವ = ತತ್+ಏವ) ಶುಭಲಗ್ನ, ಅದೇ ಸುದಿನ, ಅದೇ ನಕ್ಷತ್ರಬಲ, ಅದೇ ಚಂದ್ರಬಲ, ಅದೇ ವಿದ್ಯಾಬಲ, ಅದೇ ದೈವಬಲ'. ಕೆಲವರು ಪುರೋಹಿತರು ಈ ಮಂತ್ರವನ್ನು "ತದೇವ ಲಗ್ನಂ" ಎಂದು ಸರಿಯಾಗಿಯೇ ಪ್ರಾರಂಭಮಾಡಿ "ಸುದಿನಂ ತದೇವ" ಎಂದು ಹೇಳುವ ಬದಲು "ಸುದಿನಂ ತು, ದೇವ" ಎಂದು ತಪ್ಪಾಗಿ ಉಚ್ಚರಿಸುತ್ತಾರೆ. ಮುಂದಿನ ಸಾಲುಗಳಲ್ಲಿ ಬರುವ ಎಲ್ಲ "ತದೇವ" ಶಬ್ದಗಳನ್ನು "ತು ದೇವ" ಎಂದು ಅಧ್ವಾನ ಮಾಡಿಬಿಡುತ್ತಾರೆ. "ತದೇವ" ಎಂಬಲ್ಲಿ ಸಂಧಿವಿಚ್ಛೇದ ಮಾಡಿದರೆ "ತತ್+ಏವ" ಎಂದಾಗುತ್ತದೆ. ಮೇಲೆ ವಿವರಿಸಿದಂತೆ "ಅದೇನೆ" ಎಂದು ಅದರ ಅರ್ಥ. ದೇವರು ಎಂದರ್ಥವಲ್ಲ. 'ತತ್' ಎಂದರೆ 'ಅದು', 'ಏವ' ಅವಧಾರಣೆ. ಯಾವುದು 'ಅದು' ಒಳ್ಳೆಯ ಮಹೂರ್ತ ಎಂದರೆ ನೀವು 'ದೇವರ ನಾಮಸ್ಮರಣೆ ಮಾಡುವ ಗಳಿಗೆ' ಎಂದು ತಾತ್ಪರ್ಯ. ಒಳ್ಳೆಯ ಮುಹೂರ್ತದಲ್ಲಿ ಮದುವೆ ಮಾಡಿಕೊಟ್ಟರೂ ಎಷ್ಟೋ ಹೆಣ್ಣುಮಕ್ಕಳ ತಾಳಿ ಹರಿದುಹೋಗಿದೆ. ದಾಂಪತ್ಯಜೀವನ ಯಶಸ್ವಿಯಾಗಲು ಪಂಚಾಂಗದ ಮುಹೂರ್ತಕ್ಕಿಂತ ಮದುವೆಯಾಗುವವರ, ಅವರನ್ನು ಹೆತ್ತವರ ಮತ್ತು ಬಂಧುಬಾಂಧವರ ಮನಸ್ಸು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಮುಂದಿನ ವಚನ ಇಲ್ಲಿ ಸ್ಮರಣೀಯ:

**ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ**
**ರಾಶಿಕೂಟ ಋಣಸಂಬಂಧ ಉಂಟೆಂದು ಹೇಳಿರಯ್ಯಾ**
**ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ**
**ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ**
**ಕೂಡಲಸಂಗಮ ದೇವನ ಪೂಜಿಸಿದ ಫಲ ನಿಮ್ಮದಯ್ಯಾ!**

ಆರಂಭದಲ್ಲಿ ಉಲ್ಲೇಖಿಸಿದ ಶ್ಲೋಕದಲ್ಲಿ ಬರುವ 'ಕರಾಗ್ರ, ಕರಮಧ್ಯ ಮತ್ತು ಕರಮೂಲಗಳಲ್ಲಿ' ಅನುಕ್ರಮವಾಗಿ ಲಕ್ಷ್ಮೀ, ಸರಸ್ವತೀ, ಗೌರೀ ಇದ್ದಾರೆಂದು ಹೇಳಿರುವುದರ ಔಚಿತ್ಯವಾದರೂ ಏನು? ಈ ವಿಚಾರವಾಗಿ ವಿದ್ವನ್ಮಣಿಗಳೂ ವಯೋವೃದ್ಧರೂ ಆದ ಸಂಸ್ಕೃತ ಪ್ರೊಫೆಸರ್ ಕೆ.ಟಿ. ಪಾಂಡುರಂಗಿಯವರನ್ನು ದೂರವಾಣಿಯಲ್ಲಿ ಸಂಪರ್ಕಿಸಿದಾಗ

ಅವರಿಂದ ತಟ್ಟನೆ ಬಂದ ಪ್ರತಿಕ್ರಿಯೆ ‘ಎಂತಹ ಒಳ್ಳೆಯ ಪ್ರಶ್ನೆ ಇದು, ‘Familiarity breeds contempt’ ಎನ್ನುವಂತೆ ಇಂತಹ ವಿಚಾರಗಳ ಬಗ್ಗೆ ಭಾರತೀಯರು ಯೋಚನೆ ಮಾಡಲು ಹೋಗುವುದೇ ಇಲ್ಲವಲ್ಲಾ!’ ಎಂದು ವಿಸ್ಮಯ ವ್ಯಕ್ತಪಡಿಸಿದರು. ಅವರ ನಮ್ಮ ಸಂಭಾಷಣೆಯಲ್ಲಿ ಮೂಡಿ ಬಂದ ವಿಚಾರವೆಂದರೆ 1) ಕೈಗಳ ತುದಿಯಲ್ಲಿ ಹಣಕಾಸಿನ ವ್ಯವಹಾರ ನಡೆಯುವುದರಿಂದ ‘ಕರಾಗ್ರ’ ಸಂಪತ್ತಿನ ಪ್ರತೀಕ, 2) ಕೈಗಳ ಮಧ್ಯದಲ್ಲಿ ತಾಳೆಗರಿಗಳನ್ನು/ಪುಸ್ತಕಗಳನ್ನು ಇಟ್ಟುಕೊಂಡು ಓದುವುದರಿಂದ ‘ಕರಮಧ್ಯೇ’ ವಿದ್ಯೆಯ ಪ್ರತೀಕ, 3) ಕೈಗಳ ಮೂಲದಲ್ಲಿ ಶಕ್ತಿ ಇರುವುದರಿಂದ ‘ಕರಮೂಲೇ’ ದೈಹಿಕ ಶಕ್ತಿಯ ಪ್ರತೀಕ. ದೈಹಿಕ ಶಕ್ತಿ, ಬೌದ್ಧಿಕ ಶಕ್ತಿ ಮತ್ತು ಆರ್ಥಿಕ ಶಕ್ತಿ ಇವು ಮೂರೂ ಮನುಷ್ಯನ ಜೀವನಕ್ಕೆ ಅತ್ಯಾವಶ್ಯಕ.

ಲಕ್ಷ್ಮೀ, ಸರಸ್ವತೀ, ಗೌರೀ ಇತ್ಯಾದಿ ಪೌರಾಣಿಕ ದೇವತೆಗಳಲ್ಲಿ ನಂಬಿಕೆ ಇಲ್ಲದವರು ತಮ್ಮ ಕೈಗಳಲ್ಲಿ ಈ ದೇವತೆಗಳನ್ನು ಕಾಣಲು ಸಾಧ್ಯವಾಗದಿದ್ದರೂ ತಮ್ಮ ಭವಿಷ್ಯಜೀವನವನ್ನು ರೂಪಿಸಿಕೊಳ್ಳಲು ತಮ್ಮ ಕೈಗಳಲ್ಲಿ ಆತ್ಮವಿಶ್ವಾಸವನ್ನು ಹೊಂದಲೇಬೇಕು. ಎಲ್ಲಿಯೋ ಓದಿದ ನೆನಪು. ಒಂದು ಮುದಿ ಕತ್ತೆ ಇತ್ತು. ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ. ನಡೆಯುವಾಗ ಅದು ಎಡವಿ ಒಂದು ಹಾಳು ಬಾವಿಯಲ್ಲಿ ಬಿತ್ತು. ತನ್ನ ಯಜಮಾನ ಬಂದು ರಕ್ಷಣೆ ಮಾಡುತ್ತಾನೆಂದು ನಿರೀಕ್ಷಿಸಿತ್ತು. ಆದರೆ ಹತ್ತಾರುವರ್ಷ ದುಡಿಸಿಕೊಂಡ ಅದರ ಯಜಮಾನ ಮಾಡಿದ್ದೇನು? ಹಾಳು ಬಾವಿಯಲ್ಲಿ ಬಿದ್ದ ಮುದಿ ಕತ್ತೆಯನ್ನು ನೋಡಿದ. ಅದರಿಂದ ಈಗ ತನಗೇನು ಪ್ರಯೋಜನ ಎಂದು ವ್ಯಾವಹಾರಿಕವಾಗಿ ಆಲೋಚಿಸಿದ. ಮುದಿ ಕತ್ತೆಯಿಂದಲೂ ಪ್ರಯೋಜನವಿಲ್ಲ, ಹಾಳು ಬಾವಿಯಿಂದಲೂ ಪ್ರಯೋಜನವಿಲ್ಲವೆಂದು ಬಾವಿಯನ್ನು ಮಣ್ಣಿನಿಂದ ಮುಚ್ಚಲು ನಿರ್ಧರಿಸಿದ. ಹೊರಗಿನಿಂದ ಗಾಡಿಯಲ್ಲಿ ಮಣ್ಣನ್ನು ತಂದು ಬಾವಿಯೊಳಗೆ ಸುರಿಯತೊಡಗಿದ. ತನ್ನನ್ನು ಯಜಮಾನ ರಕ್ಷಣೆಮಾಡುತ್ತಾನೆಂದು ನಿರೀಕ್ಷಿಸಿದ್ದ ಕತ್ತೆಗೆ ಆಘಾತವುಂಟಾಯಿತು. ಮೇಲಿನಿಂದ ಮೈಮೇಲೆ ಮಣ್ಣು ಬೀಳುತ್ತಿದ್ದಂತೆಯೇ ಸಾವು ಬಂದೆರಗಿದಂತಾಯಿತು. ಆದರೂ ಧೃತಿಗೆಡದೆ ಮೈಮೇಲೆ ಬಿದ್ದ ಮಣ್ಣನ್ನು ಕೊಡವಿ ತನ್ನ ಕಾಲಬುಡದಲ್ಲಿ ತುಳಿಯತೊಡಗಿತು. ಯಜಮಾನ ಅನೇಕ ಗಾಡಿ ಮಣ್ಣನ್ನು ಸುರಿದಂತೆಲ್ಲಾ ಕಾಲಬುಡದಲ್ಲಿ ಮಣ್ಣನ್ನು ತುಳಿದು ಬದುಕುವ ಸಂಕಲ್ಪ ಮಾಡಿದ ಕತ್ತೆ ಹಾಳು ಬಾವಿಯ ಮೇಲಕ್ಕೇರಿ ಬಂತು. ಬದುಕಿನಲ್ಲಿ ಹೀಗೆ ಸವಾಲುಗಳು ಮೈಮೇಲೆ ಒಂದರ ಮೇಲೊಂದರಂತೆ ಎರಗಿ ಬರುತ್ತವೆ. ಅದರಿಂದ ಘಾಸಿಗೊಳ್ಳದೆ ಮೈಕೊಡವಿ ನಿಲ್ಲಬೇಕು, ಆ ಕತ್ತೆಯಂತೆ ಬದುಕುವ ಛಲ ತೊಡಬೇಕು.

ಸಹೃದಯ ಓದುಗರೇ! ಈಗ ಹೇಳಿ ನಿಜವಾದ ಕತ್ತೆ ಯಾರು? ನಿಸ್ಪೃಹತೆಯಿಂದ ದುಡಿದ ಆ ಪ್ರಾಣಿಯೋ ಅದನ್ನು ತನ್ನ ಸ್ವಾರ್ಥಕ್ಕಾಗಿ ದುಡಿಸಿಕೊಂಡ ಆ ನಿಷ್ಕರುಣಿ ಮನುಷ್ಯನೋ? ಹಾಳು ಬಾವಿಯಿಂದ ಕಷ್ಟಪಟ್ಟು ಮೇಲೇರಿ ಬಂದ ಆ ಕತ್ತೆ ತನ್ನನ್ನು ಜೀವಸಹಿತ ಹೂಳಲು ಮುಂದಾಗಿದ್ದ ಆ ಕಟುಕನ ಬಾಯಹಲ್ಲುಗಳು ಉದುರುವಂತೆ ಝಾಡಿಸಿ ಒದೆಯಬೇಕಿತ್ತೆಂದು ನಿಮಗೆ ಅನ್ನಿಸುವುದಿಲ್ಲವೇ? ಹಾಗೆ ಮಾಡಿದ್ದರೆ ಅದು ಸೇಡು ತೀರಿಸಿಕೊಳ್ಳುವ ಕೆಟ್ಟ ಪ್ರವೃತ್ತಿಯುಳ್ಳ ಕ್ರೂರಿ ಮನುಷ್ಯನಾಗುತ್ತಿತ್ತು; ಕಷ್ಟಸಹಿಷ್ಣು ನಿರುಪದ್ರವಿ ಕತ್ತೆಯಾಗುತ್ತಿರಲಿಲ್ಲ. “ಯಾವ ಕತ್ತೆಯೂ ನೆನಪಿಟ್ಟುಕೊಂಡು ಒದೆಯುವುದಿಲ್ಲ!”

**28.4.2010**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑